# ಪಿಬಿಎಸ್ ಜೊತೆ ಮಧುರ ಕ್ಷಣ!

ಸುಪ್ರಸಿದ್ಧ ಗಾಯಕ ಪಿ.ಬಿ. ಶ್ರೀನಿವಾಸ್ ಅವರ ನೂರಾರು ಹಾಡುಗಳನ್ನು ಕೇಳಿದ್ದ ನನಗೆ ಅವರನ್ನು ಹತ್ತಿರದಿಂದ ನೋಡಬೇಕು ಎಂಬ ಉತ್ಕಟ ಆಸೆ ಇತ್ತು. ಒಮ್ಮೆ ಅವರು ಬೆಂಗಳೂರಿಗೆ ಬಂದಿದ್ದ ಸಮಯದಲ್ಲಿ ಗೆಳೆಯನ ಮುಖಾಂತರ ಅವರನ್ನು ಕಂಡು ಮಾತನಾಡಿಸುವ ಸುಯೋಗ ಒದಗಿ ಬಂತು. ಅವರೊಂದಿಗೆ ಕಳೆದ ಕ್ಷಣ ಸವಿನೆನಪಾಗಿ ಮನದಾಳದಲ್ಲಿ ಉಳಿದಿದೆ.

■ ಮಂಜುನಾಥ ಸಿ. ಬೆಂಗಳೂರು



ಬಾಲ್ಯದಿಂದಲೂ ರೇಡಿಯೋದಲ್ಲಿ ಆಕಾಶವಾಣಿ ಸಂಗೀತ ಕಾರ್ಯಕ್ರಮಗಳನ್ನು ಕೇಳುತ್ತಾ ಬೆಳೆದ ನನಗೆ ಚಲನಚಿತ್ರ ಗೀತೆಗಳನ್ನು ಕೇಳುವ ಹವ್ಯಾಸ ಬೆಳೆಯಿತು. ವಿವಿಧ ಭಾರತಿಯಲ್ಲಿ ಪ್ರಸಾರವಾಗುತ್ತಿದ್ದ ನಂದನ, ಗೀತ ಪುಷ್ಪ, ಹಾಗೂ ಬೃಂದಾವನ ಕಾರ್ಯಕ್ರಮಗಳಲ್ಲಿ ಚಿತ್ರಗೀತೆಗಳನ್ನು ಕೇಳುತ್ತಿದ್ದೆ. ಕೇಳುತ್ತಾ ಕೇಳುತ್ತಾ, ಘಂಟಸಾಲ, ಪಿ.ಬಿ ಶ್ರೀನಿವಾಸ್, ಡಾ. ರಾಜಕುಮಾರ್, ಕೆ.ಜೆ ಯೇಸುದಾಸ್, ಎಸ್. ಜಾನಕಿ, ಪಿ.ಸುಶೀಲಾ, ವಾಣಿ ಜಯರಾಂ, ಚಿತ್ರಾ, ಎಸ್. ಪಿ. ಬಾಲಸುಬ್ರಹ್ಮಣ್ಯಂ... ಹೀಗೆ ಇನ್ನೂ ಅನೇಕ ಗಾಯಕ ಗಾಯಕಿಯರ ಅಭಿಮಾನಿಯಾದೆ. ಅದರಲ್ಲೂ ನಟ ಸಾರ್ವಭೌಮ ರಾಜಕುಮಾರ್ ಗಾಯಕರಾಗುವುದಕ್ಕೂ ಮುನ್ನ ಅವರಿಗಾಗಿ ಹಿನ್ನೆಲೆ ಗಾಯನ ಮಾಡುತ್ತಿದ್ದ ಡಾ.ಪಿ.ಬಿ. ಶ್ರೀನಿವಾಸ್ ಅವರ ಪರಮ ಅಭಿಮಾನಿಯಾಗಿದ್ದೆ.

ಸಿನಿಮಾದಲ್ಲಿ ಹಾಡಿಗೆ ರಾಜ್ ನಟಿಸಿ ಹಾಡೋದು ನೋಡುತ್ತಿದ್ದ ನನಗೆ ಪಿ.ಬಿ.ಎಸ್ ಹಾಡುವ ಎಲ್ಲಾ ಹಾಡುಗಳನ್ನು ಅಣ್ಣಾವ್ರೇ ಹಾಡೋದು ಅಂದುಕೊಂಡಿದ್ದೆ. ನಂತರದ ದಿನಗಳಲ್ಲಿ ನಿಧಾನವಾಗಿ ಗಾಯಕ ಗಾಯಕಿಯರ ದನಿ ಗುರುತಿಸುವುದು ಅಭ್ಯಾಸವಾಯಿತು. ರೇಡಿಯೊ ಜೊತೆಗೆ ಟೇಪ್ ರೆಕಾರ್ಡರ್ ಮನೆಗೆ ಬಂದ ಮೇಲೆ ನಮ್ಮಣ್ಣ ಸುಮಾರು ಪಿ.ಬಿ.ಎಸ್ ಹಾಡಿರುವ ಕ್ಯಾಸೆಟ್‌ಗಳನ್ನು ತಂದು ಜೋಡಿಸಿದ್ದ. ಅವುಗಳನ್ನು ನಾನು ದಿನವೂ ಕೇಳುತ್ತಿದ್ದೆ. ಅದರಲ್ಲೂ ಅವರು ಭಾವಪೂರ್ಣವಾಗಿ ಹಾಡಿದ್ದ 'ನಾಂದಿ' ಚಿತ್ರದ 'ಹಾಡೊಂದ ಹಾಡುವೆ', 'ಸಿಪಾಯಿ ರಾಮು' ಚಿತ್ರದ 'ಎಲ್ಲಿಗೆ ಪಯಣ..' ಕೇಳುತ್ತಿದ್ದರೆ ಕಣ್ಣು ಹನಿಯಾಗುತ್ತಿತ್ತು. ಬಂಗಾರದ ಮನುಷ್ಯದ. 'ನಗು ನಗುತಾ ನಲಿ ನಲಿ' ನನ್ನ ಜೀವನದ ಧ್ಯೇಯಗೀತೆಯಾಗಿತ್ತು. 'ಕಸ್ತೂರಿ ನಿವಾಸ'ದ 'ಆಡಿಸಿ ನೋಡು..', ಮಾನಸ ಸರೋವರದ 'ವೇದಾಂತಿ ಹೇಳಿದನು' ಕೇಳುತ್ತಿದ್ದರೆ ಬದುಕಿನ ತಾತ್ವಿಕ ಸತ್ಯ ಮನಮುಟ್ಟುತ್ತಿತ್ತು. ಇನ್ನು ಪ್ರೇಮಗೀತೆಗಳಲ್ಲಿ 'ನೀ ಮುಡಿದಾ ಮಲ್ಲಿಗೆ, 'ರವಿವರ್ಮನಾ..' 'ಒಲುಮೆಯ ಹೂವೆ..' 'ಒಲವೇ ಜೀವನ ಸಾಕ್ಷಾತ್ಕಾರ..' ಇನ್ನೂ ಹಲವಾರು ಗೀತೆಗಳು ನನ್ನಲ್ಲೂ ನವಿರಾದ ಪ್ರೇಮ ಭಾವಗಳನ್ನು ಅರಳಿಸಿ, ನನ್ನ ಮನಸೂರೆಗೊಂಡಿದ್ದವು.

ಸಿರಿವಂತನಾದರೂ ಕನ್ನಡ ನಾಡಲ್ಲೇ ಮೆರೆವೆ.. 'ನಾವಾಡುವ ನುಡಿಯೇ ಕನ್ನಡ ನುಡಿ..' ಕೇಳುತ್ತಾ ನನ್ನ ಕನ್ನಡಾಭಿಮಾನ ನೂರ್ಮಡಿಗೊಳ್ಳುತ್ತಿತ್ತು. ಇಷ್ಟೆಲ್ಲಾ ಗೀತೆಗಳನ್ನು ಹಾಡಿರುವ ಗಾಯಕನನ್ನು ನೇರವಾಗಿ ಭೇಟಿಯಾಗಿ, ಮಾತನಾಡಿಸುವ ಮಧುರ ಕ್ಷಣಕ್ಕಾಗಿ ಕಾಯುತ್ತಿದ್ದೆ. ನಾನು ಕನ್ನಡ ಎಂ.ಎ ಮಾಡುತ್ತಿದ್ದ ಸಮಯದಲ್ಲಿ ಪತ್ರಕರ್ತರೊಬ್ಬರ ಪರಿಚಯವಾಯಿತು. ಒಂದು ದಿನ ಅವರು 'ಪಿ.ಬಿ.ಎಸ್ ಬೆಂಗಳೂರಿಗೆ ಬಂದಿರುವುದಾಗಿಯೂ, ಅವರನ್ನು ಸಂದರ್ಶನ ಮಾಡಲು ಹೋಟೆಲ್ ಒಂದಕ್ಕೆ ಹೋಗುತ್ತಿರುವುದಾಗಿಯೂ, ಜೊತೆಯಲ್ಲಿ ನೀನು ಬರುವುದಾದರೆ ಬಾ' ಎಂದು ಕರೆದರು. ನನಗೆ ಸ್ವರ್ಗ ಕೈಗೆ ಸಿಕ್ಕಷ್ಟು ಸಂತೋಷವಾಯಿತು. ಅವರನ್ನು ಭೇಟಿಯಾದಾಗ ಪಿ.ಬಿ.ಎಸ್ ಅವರು ಕಂದು ಬಣ್ಣದ ಟೋಪಿ ಧರಿಸಿದ್ದರು. 'ನಾನು ಕನ್ನಡ ಅಧ್ಯಾಪಕ ಸರ್' ಎಂದು ಪರಿಚಯಿಸಿಕೊಂಡೆ. ನಿಮ್ಮ 'ರವಿವರ್ಮನ ಕುಂಚದಾ ಕಲೆ' ಹಾಡು ತುಂಬಾ ಇಷ್ಟ ಸರ್ ಎಂದೆ. ಅದಕ್ಕೆ ಅವರು ತುಂಬಾ ಸಂತೋಷ ಎಂದು ಮುಗುಳ್ನಕ್ಕರು.

ಹಾಗೇ ಭಕ್ತ ಕನಕದಾಸ ಚಿತ್ರದ ಹಾಡಿನ ಆರಂಭಕ್ಕೆ ಮುನ್ನ ನೀವು ಹೇಳುವ 'ಶೃಂಗಾರ ಶೀಲ ಸಂಗೀತ ಲೋಲ' ಎನ್ನುವ ನುಡಿಗಳು ನಮ್ಮನ್ನು ಬೇರೊಂದು ಲೋಕಕ್ಕೆ ಕರೆದೊಯ್ಯುತ್ತದೆ ಸರ್' ಎಂದೆ. ನೀನು ಮಹಾನ್ ಸಂಗೀತ ರಸಿಕ ಎಂದು ಬೆನ್ನು ತಟ್ಟಿದರು. ಅವರ ಜೇಬಿನ ಪೆನ್‌ಗಳನ್ನು ನೋಡಿ ಕುತೂಹಲಕ್ಕೆ ಇಷ್ಟೊಂದು ಪೆನ್ ಯಾಕೆಂದು ಕೇಳಿದಾಗ 'ನನಗೆ ಕನ್ನಡ, ತೆಲುಗು, ತಮಿಳು, ಮಲಯಾಳಂ, ಹಿಂದಿ, ಇಂಗ್ಲಿಷ್, ಉರ್ದು ಮತ್ತು ಸಂಸ್ಕೃತ ಭಾಷೆಗಳಲ್ಲಿ ಓದಲು ಬರೆಯಲು ಗೊತ್ತು. ಹೀಗಾಗಿ ಒಂದೊಂದು ಭಾಷೆಗೆ ಒಂದೊಂದು ಪೆನ್' ಎಂದು ಹೆಮ್ಮೆಯಿಂದ ಹೇಳಿದರು.

ನಂತರ ಅವರ ಜೊತೆಯಲ್ಲಿ ಒಂದು ಫೋಟೊ ತೆಗೆಸಿಕೊಂಡೆವು. ಮೊದಲ ಬಾರಿಗೆ ಕನ್ನಡದ ಶ್ರೇಷ್ಠ ಗಾಯಕರೊಬ್ಬರನ್ನು ಹತ್ತಿರದಿಂದ ನೋಡಿ ಫೋಟೊ ತೆಗೆಸಿಕೊಂಡಿದ್ದು ನನ್ನ ಜೀವನದಲ್ಲಿ ಅವಿಸ್ಮರಣೀಯ ಘಟನೆಯಾಗಿ ಉಳಿದಿದೆ. ■